Code No. **35 Y**

ಮುದ್ರಣ ಪರೀಕ್ಷೆ

**PRINTING EXAMINATION**

# ಅಕ್ಷರ ಜೋಡಿಸುವ ಕೆಲಸ — ಪ್ರೌಢ ದರ್ಜೆ

**ಪತ್ರಿಕೆ – II ( ಪ್ರಾಯೋಗಿಕ )**

# COMPOSITOR'S WORK — SENIOR GRADE

**Paper – II ( Practical )**

( Kannada & English Versions )

ಜನವರಿ, 2014 ] [ ಸಮಯ : 3 ಗಂಟೆಗಳು

[ ಗರಿಷ್ಠಾಂಕ : 40

***ಸೂಚನೆಗಳು :*** ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ.

*Instructions :* Answer *all* questions.

1. ಅಕ್ಷರ ಜೋಡಣೆ ಹಿಡಿಕೆಯ ಚಿತ್ರ ಬರೆದು, ಭಾಗಗಳನ್ನು ಗುರುತಿಸಿ. 10

   Draw sketch of composing stick and explain its parts.

2. ಈ ಕೆಳಗೆ ಕೊಟ್ಟಿರುವ ಕನ್ನಡ ವಿಷಯವನ್ನು ಲಭ್ಯವಿರುವ ಅಚ್ಚು ಮೊಳೆ ಉಪಯೋಗಿಸಿ **24 ಪೈಕಾ ಅಗಲಕ್ಕೆ** ಅಕ್ಷರ ಜೋಡಣೆ ಮಾಡಿ ಮತ್ತು ಕರಡು ಪ್ರತಿಯನ್ನು ಸಲ್ಲಿಸಿ.

   Set the following Kannada matter using available point type for *24 pica's* width and submit a corrected proof. 30

ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ವೀರೋಚಿತ ಚರಿತ್ರೆ ಇದೆ, ತ್ಯಾಗ-ಬಲಿದಾನಗಳ ಪರಂಪರೆ ಇದೆ. ಸ್ವಾತಂತ್ರ್ಯ ಗಳಿಸಲು ನಮ್ಮ ಹಿರಿಯರು ರಕ್ತ-ಬೆವರು ಹರಿಸಿ ನಡೆಸಿದ್ದ ಹೋರಾಟವನ್ನು ನಾವೆಂದೂ ಮರೆಯಬಾರದು. ಇದನ್ನು ಸ್ಮರಿಸಿಕೊಂಡಾಗಲೇ ನಾವು ಇಂದು ಅನುಭವಿಸುತ್ತಿರುವ ಸ್ವಾತಂತ್ರ್ಯದ ಮಹತ್ತ್ವ ನಮಗೆ ಅರಿವಾಗುವುದು. ಇದರಿಂದಲೇ ಗಳಿಸಿದ್ದ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಹೋಗಬೇಕೆನ್ನುವ ಜವಾಬ್ದಾರಿ ನಮ್ಮಲ್ಲಿ ಮೂಡುವುದು. ಸ್ವಾತಂತ್ರ್ಯೋತ್ಸವ ಎನ್ನುವುದು ಕೇವಲ ಸಂಭ್ರಮದ ಆಚರಣೆಯ ಕಾಲ ಅಲ್ಲ. ಇದು ಆಡಳಿತ ನಡೆಸುತ್ತಿರುವ ನಮ್ಮನ್ನೂ ಸೇರಿದಂತೆ ಎಲ್ಲರಿಗೂ ಆತ್ಮಾವಲೋಕನದ

[ Turn over

ಸಮಯವೂ ಹೌದು. ಸ್ವಾತಂತ್ರ್ಯ ಗಳಿಸಿದ ಉದ್ದೇಶ ಈಡೇರಿಕೆಯಾಗಿದೆಯೇ ? ಅದು ಎಲ್ಲರಿಗೂ ದಕ್ಕಿದೆಯೇ ? ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ನಮ್ಮ ಹಿರಿಯ ಜೀವಗಳು ಕಂಡ ಕನಸು ನನಸಾಗಿದೆಯೇ ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನು ನಾವು ಮಾಡಬೇಕಾಗಿದೆ.

'ಆರ್ಥಿಕ ಸ್ವಾತಂತ್ರ್ಯ ಇಲ್ಲದ ರಾಜಕೀಯ ಸ್ವಾತಂತ್ರ್ಯ ಅರ್ಥಹೀನ' ಎಂದಿದ್ದರು ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್. ಸಮಾನತೆಯನ್ನು ಸಾರುವ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಅಸಮಾನತೆಯ ಬುನಾದಿಯ ಮೇಲೆ ನಿಂತಿರುವ ಇಲ್ಲಿನ ಸಾಮಾಜಿಕ ವ್ಯವಸ್ಥೆ ನಡುವೆ ನಡೆಯಬಹುದಾದ ಸಂಘರ್ಷದ ಬಗ್ಗೆ ಅಂಬೇಡ್ಕರ್ ವ್ಯಕ್ತಪಡಿಸಿದ್ದ ಭೀತಿಯನ್ನು ನಿರಾಕರಿಸುವ ಸ್ಥಿತಿಯಲ್ಲಿ ನಾವು ಇಂದೂ ಕೂಡಾ ಇಲ್ಲ. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಅವಕಾಶಗಳು ಸಮಾನ ರೀತಿಯಲ್ಲಿ ಹಂಚಿಕೆಯಾಗಿಲ್ಲ ಎಂಬುದು ವಾಸ್ತವ. ಇದರಿಂದಾಗಿ ಸಾಮಾಜಿಕ ಬಿಕ್ಕಟ್ಟುಗಳನ್ನು ನಾವು ಎದುರಿಸಬೇಕಾಗಿದೆ. ರಾಜಕೀಯ ಸ್ವಾತಂತ್ರ್ಯದ ಜತೆಯಲ್ಲಿ ಆರ್ಥಿಕ ಸ್ವಾತಂತ್ರ್ಯವನ್ನು ಮುಟ್ಟಿಸುವುದೇ ಅರ್ಥಪೂರ್ಣವಾದ ಸ್ವಾತಂತ್ರ್ಯೋತ್ಸವ ಆಚರಣೆ ಎಂದು ಭಾವಿಸಿದೆ. ಸಂಪತ್ತು, ಅಧಿಕಾರ ಮತ್ತು ಅವಕಾಶ ಸಮಾಜದ ಎಲ್ಲಾ ವರ್ಗದ ಜನರಿಗೂ ಸಮಾನ ರೀತಿಯಲ್ಲಿ ಹಂಚಿಕೆಯಾಗಬೇಕೆಂಬುದು ಪ್ರಜಾಪ್ರಭುತ್ವದ ಮೂಲ ಆಶಯ.